ತಾಯಿಯಾಗಿ ಎಂಟು ಹತ್ತು ದಿನಗಳಾದರೂ ನಿಶಿಕಾಂತ ಆಕೆಯನ್ನು ಭೇಟಿ ಮಾಡಲು ಹೋಗಿರಲಿಲ್ಲ. ಮನೆಯಲ್ಲಿಯೇ ಬಿದ್ದುಕೊಂಡು ವೇಳೆ ಕಳೆದ. ತನ್ನ ಜೀವನದಲ್ಲಿ ಅಘಟಿತ ಘಟನೆ ನಡೆಯುವ ಸಂಭವ ಉಂಟು ಎಂದು ಅನಿಸಹತ್ತಿತು. ದಿನಗಳು ಕಳೆಯತೊಡಗಿದವು. ರೇವತಿಯ ಮನೆಗೆ ಹೋಗುವ ವೇಳೆ ಬಂದಿತು. ಆತ ಗೊಂದಲಗಳಲ್ಲಿ ಒದ್ದಾಡುತ್ತಿದ್ದಾನೆ ಎಂದು ರೇವತಿಗೆ ಅರ್ಥವಾಯಿತು. ಒಂದು ದಿನ ಆಕೆ ಅವನನ್ನು, ''ಈ ನವಜಾತ ಶಿಶುವಿನ ಬಗ್ಗೆ ನಿನ್ನ ಭಾವನೆ ಏನು?" ಎಂದು ಕೇಳಿದಳು. ಪ್ರಶ್ನೆ ವಿಚಿತ್ರವಾಗಿತ್ತು. ಅದನ್ನು ಆತ ನಿರೀಕ್ಷೆ ಕೂಡ ಮಾಡಿರಲಿಲ್ಲ. "ಈ ಶಿಶುವಿನ ಬಗ್ಗೆ ಎಂತಹ ಭಾವನೆ? ನಿನಗೆ ಈ ಶಿಶುವಿನ ಬಗೆಗೆ ಯಾವ ಭಾವನೆ ಇದೆಯೋ, ಅದೇ ಭಾವನೆ ನನ್ನದೂ." "ಹಾಗೆ ನೋಡಿದರೆ ನನಗೂ ಯಾವ ಭಾವನೆಗಳು ಇಲ್ಲ" ಎಂದು ಆಕೆ ತಡವರಿಸುತ್ತ ಹೇಳಿದಳು. ನಂತರ ಕೆಲ ನಿಮಿಷ ವಿಚಾರ ಮಗ್ನಳಾದಳು. ಏನು ಮಾತನಾಡಬೇಕು ಎಂದು ತಿಳಿಯದೆ ಗೊಂದಲದಲ್ಲಿ ಬಿದ್ದಳು. "ನನ್ನ ಭಾವನೆ ಏನೇ ಇದ್ದರೂ, ಈ ಶಿಶು ನನ್ನನ್ನು ಅಮ್ಮಾ ಎಂದೇ ಕೂಗುವುದು" ಎಂದಳು. "ಅದು ಸರಿಯಾಗಿಯೇ ಇದೆ. ಯಾಕೆಂದರೆ ನೀನು ಜನ್ಮವಿತ್ತ ತಾಯಿ.'' ಆಕೆ ಪ್ರತಿಸಲದಂತೆ ಶರೀರ ಹಾಗೂ ಮನಸ್ಸಿನ ಬಗ್ಗೆ ಮಾತನಾಡಬಹುದು ಎಂದು ಆತ ತಿಳಿದುಕೊಂಡಿದ್ದ. ಆದರೆ ಹಾಗೇನೂ ಆಗಲಿಲ್ಲ. "ಈ ಶಿಶು ನನಗೆ ಅಮ್ಮಾ ಎಂದೇನೋ ಕೂಗುತ್ತದೆ. ನಿನಗೆ ಏನೆಂದು ಕರೆಯಬಹುದು? ಮಾಮಾ ಎಂದೋ? ಅದು ಸರಿ ಕಾಣಬಹುದೆ?" ಆಕೆಯ ಪ್ರಶ್ನೆಗೆ ಉತ್ತರವಿರಲಿಲ್ಲ. ಆತ ಪೆದ್ದನಂತೆ ಅತ್ತ ಇತ್ತ ನೋಡುತ್ತಿದ್ದ. ಆಕೆ ತುಸು ಗಾಂಭೀರ್ಯದಿಂದ ನುಡಿದಳು: "ಈತ ನನ್ನದೇ ಮುಖಚರ್ಯೆ ಹಾಗೂ ಮೈಕಟ್ಟು ಹೊಂದಿದ್ದಾನೆ. ಅಂದ ಮೇಲೆ ನೀನು ಈ ಶಿಶುವನ್ನು ಪ್ರೀತಿಸಲು ಅಡ್ಡಿಯಿಲ್ಲ. ಒಂದು ವೇಳೆ ಈತ ಗಣಪುಲೆಯ ಕಣ್ಣು ಮೂಗಿನ ಹೋಲಿಕೆ ಇದ್ದರೆ ಮಾತ್ರ...'' ಆತನಿಗೆ ಆಕೆಯ ಮಾತಿನಿಂದ ಕೋಪ ಬಂದಿತು. "ಹಾಗಿದ್ದರೆ ನಾನು ಈ ಶಿಶುವನ್ನು ತಿರುಗಿ ಸಹ ನೋಡುತ್ತಿದ್ದಿಲ್ಲ." ಇಂತಹ ವ್ಯರ್ಥ ಸಂಭಾಷಣೆಯಲ್ಲಿ ವೇಳೆ ಕಳೆದದ್ದೇ ಗೊತ್ತಾಗಲಿಲ್ಲ. ಕೊನೆಗೆ ರೇವತಿ, "ಎನಿ ವೇ, ನಿನಗೆ ಈ ಶಿಶುವಿಗೆ ಯಾವದೇ ಸಂಬಂಧವಿಲ್ಲ. ಹಾಗೆ ನೋಡಿದರೆ ನನಗೂ ಇದರ ಸಂಬಂಧವಿಲ್ಲ. ಆದರೆ ನನ್ನ ಶರೀರದಿಂದ ಮಾತ್ರ ಇದು ಜನ್ಮ ತಾಳಿದೆ. ಇದು ನನ್ನ ಮಾಂಸದ ತುಣುಕು ಅಷ್ಟೇ." ಆಕೆ ತನ್ನ ಮಾತು ನಿಲ್ಲಿಸಿದಳು. ಆತ ಅಲ್ಲಿಂದ ಹೊರ ಬಿದ್ದ. ಮೂರು ವಸಂತಗಳು ಕಳೆದು ಹೋದವು. ನಿಶಿಕಾಂತನಿಗೆ ರೇವತಿಯ ಮೇಲೆ ಪ್ರೀತಿ ಸ್ವಲ್ಪವೂ ಕಡಿಮೆ ಆಗಿರಲಿಲ್ಲ. ಆತನ ದೃಷ್ಟಿಯಲ್ಲಿ ಶರೀರಕ್ಕೆ ಯಾವದೇ ಪ್ರಾಮುಖ್ಯತೆ ಇರಲಿಲ್ಲ. ತಮ್ಮಿಬ್ಬರ ಮನ ಒಂದಾಗಿರುವುದರಿಂದ ತಮ್ಮನ್ನು ಬೇರೆ ಮಾಡಲು ದೇವರಿಗೂ ಅಶಕ್ಯ ಎಂಬುದು ಅವನ ಭಾವನೆ ಆಗಿತ್ತು. ನಿಜ ಹೇಳಬೇಕೆಂದರೆ ಆತ ಮನಸುಖರಾಯನಿದ್ದ. ಆತನ ವಯಸ್ಸು ಹೆಚ್ಚಾಗುತ್ತಲೇ ಇತ್ತು. ರೇವತಿ ಆತನ ಶರೀರದ ಪ್ರತಿ ಕಣ ಕಣದಲ್ಲಿ ತುಂಬಿಕೊಂಡದ್ದರಿಂದ ಪರಸ್ತ್ರೀಯರ ಕಡೆಗೆ ಆತ ನಿರ್ಲಕ್ಷ್ಯ ಮಾಡಿದ. ನಿಶಿಕಾಂತನ ಮದುವೆ ಆಗಬೇಕು, ಗೃಹಸ್ಥ ಜೀವನ ನಡೆಸಬೇಕು ಹಾಗೂ ಸಾಮಾನ್ಯ ಜನರ ತರಹ ಇರಬೇಕೆಂದು ಕೆಲವು ಪ್ರಾಮಾಣಿಕ ಪ್ರಯತ್ನಗಳು ಆದವು. ಆದರೆ ಅವೆಲ್ಲವು ವ್ಯರ್ಥವಾದವು. ನಿಶಿಕಾಂತನಿಗೆ, ರೇವತಿಯ ಮನಸ್ಸು ಹಾಗೂ ಶರೀರದಲ್ಲಿ ನಡೆಯುತ್ತಿರುವ ಹೊಯ್ದಾಟ ಚೆನ್ನಾಗಿ ತಿಳಿದಿತ್ತು. ಆಕೆಗಿಂತ ತಾನು ಸುಖಿ ಎಂದು ತಿಳಿದುಕೊಂಡಿದ್ದ. ರೇವತಿಯ ಜೀವನ ಸಂದಿಗ್ಧತೆಯಿಂದ ಕೂಡಿದೆ ಎಂದು ಅವನಿಗೆ ಖಾತ್ರಿಯಾಗಿತ್ತು. ಇತ್ತೀಚೆಗೆ ರೇವತಿಯ ಭೆಟ್ಟಿ ಕಡಿಮೆ ಆಗುತ್ತ ಬಂದಿತ್ತು. ಆತನದು ಅಡ್ಡಾಡುವ ನೌಕರಿ. ತಿಂಗಳಲ್ಲಿ ಮೂರು ವಾರ ಹೊರಗೆ ಇರಬೇಕಾಗುತ್ತಿತ್ತು. ಮನೆಯಲ್ಲಿ ಈತನಿಗಾಗಿ ದಾರಿ ಕಾಯುವವರು ಯಾರೂ ಇರಲಿಲ್ಲ. ಹೀಗಾಗಿ ಮನೆಗೆ ಬರುವ